# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:548/2021

**ಸಾಕ್ಷಿಯನ್ನು ದಿಃ 22.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ನಾಗರಾಜು | ಸಿಡಬ್ಲ್ಯೂ:2 | ಪಿಡಬ್ಲ್ಯೂ:2 |
| ತಂದೆಯ ಹೆಸರು | ಬಸುಲಿಂಗಪ್ಪ | | |
| ವಯಸ್ಸು | 64 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸಸ್ಥಳ | ಕಿರಿಜಾಜಿ. | | |

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 299 ರಡಿ ಸಾಕ್ಷಿ ವಿಚಾರಣೆ**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಆರೋಪಿ ಮಹೇಶ್ ನನಗೆ ಗೊತ್ತು. ಚಾಸಾ 1 ರವರು ನನಗೆ ಗೊತ್ತು. ಚಾಸಾ 3 ಮಂಜುಳಾ ರವರು ಗೊತ್ತು, ಅವರು ಚಾಸಾ 1 ರವರ ಹೆಂಡತಿ. ಚಾಸಾ 4 ಧನಂಜಯ, ಚಾಸಾ 5 ಧನಂಜಯ ಕುಮಾರ್, ಚಾಸಾ 6 ನಾಗಮ್ಮ, ಚಾಸಾ 7 ಸುಂದರ್ ಎಲ್ಲರೂ ಗೊತ್ತು. ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಬೆಳಿಗ್ಗೆ 10-11 ಗಂಟೆ ಸುಮಾರಿಗೆ ನಾನು ಕಿರಿಜಾಜಿಯಲ್ಲಿರುವ ನಮ್ಮ ತಮ್ಮನ ಮನೆಗೆ ಹೋಗಿ ಬರುತ್ತಿರುವಾಗ ಆರೋಪಿ ಮಹೇಶ್ ತನ್ನ ತಾಯಿ ನಾಗಮ್ಮ ಅದ ಚಾಸಾ 6 ರವರಿಗೆ ಕಲ್ಲಿನಿಂದ ತಲೆಗೆ, ಮೂಖಕ್ಕೆಲ್ಲಾ ಹೊಡೆದಿದ್ದ. ಆಗ ತಲೆ, ಮುಖವೆಲ್ಲಾ ರಕ್ತಮಯವಾಗಿತ್ತು.ಆಗ ನಾನು ಆರೋಪಿಗೆ ಅವರ ಜೀವನ ಅವರು ನೋಡುತ್ತಿದ್ದಾರೆ, ನಿವೇನು ಅನ್ನ ಹಾಕುವುದಿಲ್ಲವಲ್ಲಾ ಎಂದು ಕೇಳಿದ್ದಕ್ಕೆ ಆರೋಪಿ ನನಗೂ ಕಾಲ ಮೇಲೆ ದೊಡ್ಡ ಕಲ್ಲು ಎತ್ತಿ ಹಾಕಿದ, ಹಲ್ಲಿನಿಂದ ಕೈಗೆ ಕಚ್ಚಿ ರಕ್ತ ಗಾಯಗೊಳಿಸಿದ. ಅಲ್ಲದೆ ಆರೋಪಿ

ಚಾಸಾ 1 ಪಟೇಲ್ ಶಂಕ್ರಯ್ಯ ರವರಿಗೆ ಕಲ್ಲಿನಿಂದ ಕಣ್ಣಿಗೆ ಹೊಡೆದ, ಬಿಡಿಸಲು ಬಂದ ಆರೋಪಿ ಹೆಂಡತಿಗೂ ಕಲ್ಲಿನಿಂದ ಹೊಡೆದು, ಕೈ ಬೆರಳಿಗೆ ಕಚ್ಚಿದ್ದ ನಂತರ ಕುಡಿದು ಗಲಾಟೆ ಮಾಡಿರುತ್ತಾನೆ. ಅನಂತರ ನಾನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ನಂತರ ಚಾಸಾ 1 ಶಂಕ್ರಯ್ಯ ಎಂಬುವವರು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಸ್ಥಳ ಮಹಜರ್ ಆಗಿದ್ದು, ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಈಗಾಗಲೆ ನಿಪಿ. 2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನುಪಿ. 2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸರು ಮಹಜರ್ ಮಾಡುವ ಕಾಲಕ್ಕೆ ತೆಗೆದುಕೊಂಡಿದ್ದರು. ಮಹಜರ್ ಮಾಡುವ ಕಾಲಕ್ಕೆ ಚಾಸಾ 1, 5 ಮತ್ತು 7 ರವರು ಇದ್ದರು. ಮಹಜರ್ ಮಾಡಿದಾಗ ಸಮಯ ಮಧ್ಯಾಹ್ನದ ವೇಳೆ ಆಗಿತ್ತು. ಮಹಜರ್ ಮಾಡುವ ಸಮಯದಲ್ಲಿ ಕಲ್ಲುಗಳನ್ನು ಅಮಾನತ್ತು ಪಡಿಸಿಕೊಂಡರು. ಸದರಿ ನ್ಯಾಯಾಲಯದ ಮುಂದಿರುವ ಮು.ಮಾ 1 ರ 3 ಕಲ್ಲುಗಳನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲು ಸಸಅ ರವರಿಂದಃ-**

ಗಲಾಟೆಆಯಿತು, ಆರೋಪಿತನು ತನ್ನ ತಾಯಿ ಚಾಸಾ 6 ರವರನ್ನು ಹೊಡೆಯುತ್ತಿದ್ದಾಗ ನಾನು ಬಿಡಿಸಲು ಹೋದ ದಿಃ 10.06.2020 ರಂದು ಎಂದರೆ ಸರಿ. ಆಗ ಸಮಯ ಬೆಳಿಗ್ಗೆ 11-11.15 ಆಗಿತ್ತು ಎಂದರೆ ಸರಿ. ಆರೋಪಿ ಮಹೇಶ್ ರವರು ನಮಗೆಲ್ಲಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ. ಆಗ ಚಾಸಾ 4 ಮತ್ತು 5 ರವರು ಬಂದು ಸಮಾಧಾನ ಪಡಿಸಿ ಗಲಾಟೆ ಬಿಡಿಸಿದರು ಎಂದರೆ ಸರಿ. ದಿಃ

10.06.2020 ರಂದು ಪೊಲೀಸರು ಮಹಜರ್ ಗೆಂದು ಬಂದಿದ್ದರು ಎಂದರೆ ಸರಿ. ಆಗ ಸಮಯ ಸಂಜೆ 4.30 ರಿಂದ 5.15 ಆಗಿತ್ತು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ತಲೆ ಮರೆಸಿಕೊಂಡಿರುತ್ತಾನೆ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.